# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s NeoGreen Power (P) Limited ಕಂಪನಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 5 ಮೆ.ವ್ಯಾ. (3.75 ಮೆ.ವ್ಯಾ ಪವನ + 1.25 ಮೆ.ವ್ಯಾ. ಸೌರ) ಸಾಮರ್ಥ್ಯದ ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :**
1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/ NGPPL-5 MW (3.75 W + 1.25 S)/Davanagere/F-32/ 2023 0723, ದಿನಾಂಕ:03.03.2023.
2) ದಿನಾಂಕ:04.03.2023 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿ.
3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

ಸಂ. 888 ದಿನಾಂಕ 14/3/23

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರ.ಸಂ. (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s NeoGreen Power (P) Limited ಕಂಪನಿಗೆ ದಾವಣಗೆರೆ ಜಿಲ್ಲೆಯ, ಜಗಳೂರು ತಾಲ್ಲೂಕಿನ, ಬಿಸ್ತುವಲ್ಲಿ, ಕಸ್ತೂರಿಪುರ, ಗೋಪಗೊಂಡನಹಳ್ಳಿ ಮತ್ತು ಕುಲಬನಹಳ್ಳಿ ಗ್ರಾಮಗಳಲ್ಲಿ 5 ಮೆ.ವ್ಯಾ. (3.75 ಮೆ.ವ್ಯಾ. ಪವನ + 1.25 ಮೆ.ವ್ಯಾ. ಸೌರ) ಪವನ ಮತ್ತು ಸೌರ ಮಿಶ್ರಿತ ಹೈಬ್ರಿಡ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್. ಇ.ಡಿ.ಎಲ್. ನಿಯಮಿತಕ್ಕೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮುಖಾಂತರ ಸ್ವಂತ ಬಳಕೆಗೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 5 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

M/s NeoGreen Power (P) Limited ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿಯವರು 3.75 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ 0.75 ಮೆ.ವ್ಯಾ. ಸಾಮರ್ಥ್ಯದ 5 ವಿಂಡ್ ಟರ್ಬೈನ್‌ಗಳನ್ನು ಅಳವಡಿಸಲು ಪ್ರತಿ ಟರ್ಬೈನ್‌ಗೆ 05 ಎಕರೆಯಂತೆ ಒಟ್ಟು 25 ಎಕರೆ (5 Nos of WTG x 5 Acres = 25 Acres) ಜಮೀನನ್ನು ಟೋಪೋಶೀಟ್ ಸಂಖ್ಯೆ:57 B/7ರಲ್ಲಿ ಉಪಯೋಗಿಸಿಕೊಳ್ಳಬಹುದು. ಈ ಕೋರಿರುವ ಸ್ಥಳವು ಈ ಹಿಂದೆ M/s JSW Renew Energy Private Limited ಕಂಪನಿಗೆ ಹಂಚಿಕೆಯಾಗಿರುವ 20 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಬರುತ್ತಿದ್ದು, ಸದರಿಯವರ 20 WTG ಗಳಿಗೆ ತೊಂದರೆಯಾಗದಂತೆ M/s NeoGreen Power (P) Limited ಕಂಪನಿಯು 20 WTGs ಅಳವಡಿಸುತ್ತಿರುವುದರಿಂದ, ಸದರಿಯವರು ಹಂಚಿಕೆಗೆ ಕೋರಿರುವ ಸ್ಥಳವು ಲಭ್ಯವಿರುತ್ತದೆ. ಮುಂದುವರೆದು, 1.25 ಮೆ.ವ್ಯಾ ಸಾಮರ್ಥ್ಯದ ಸೌರ ಘಟಕಗಳನ್ನು ಅಳವಡಿಸಲು ಪ್ರತಿ ಮೆ.ವ್ಯಾ ಸಾಮರ್ಥ್ಯಕ್ಕೆ 4 ಎಕರೆಯಂತೆ ಒಟ್ಟು 5 ಎಕರೆ (1.25 MW x 4 Acre = 5 Acres) ಜಮೀನು ಸೇರಿ ಒಟ್ಟು 30 ಎಕರೆ ಜಮೀನನ್ನು ಉಪಯೋಗಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿರುತ್ತಾರೆ.

M/s NeoGreen Power (P) Limited ದಿನಾಂಕ:12.12.2022ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ಬೆಂಗಳೂರಿನಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿ ಕಂಪನಿಯ ನೆಟ್‌ವರ್ತ್ ದಿನಾಂಕ:28.02.2023ರ ಅಂತ್ಯಕ್ಕೆ ರೂ.10.15 ಕೋಟಿಗಳಾಗಿದ್ದು, ಸದರಿ ನೆಟ್‌ವರ್ತ್‌ನ್ನು ಕೆ.ಆರ್.ಇ.ಡಿ.ಎಲ್. ಲೆಕ್ಕ ವಿಭಾಗದಿಂದ ಪರಿಶೀಲಿಸಲಾಗಿದೆ ಎಂದು ಕೆ.ಆರ್.ಇ.ಡಿ.ಎಲ್.ನಿಯಮಿತವು ತಿಳಿಸಿರುತ್ತದೆ.

MD KREDL

GM (Tech) KREDL

Inward No. 1987
Date 24/3/2023
Sig.

....2